ಎಂ ವಿ ಸಿ ನಂಃ 572/2022
ಪಿ. ಡಬ್ಲ್ಯೂ-2

**(ಇಂದು ದಿನಾಂಕ 08-05-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಮುಖ್ಯವಿಚಾರಣೆಃ ಅರ್ಜಿದಾರರ ಪರ ಶ್ರೀ ಎಚ್ ಎಸ್ ಸಿ ವಕೀಲರಿಂದ**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ವಿಷಯಗಳು ಸತ್ಯವಾಗಿರುತ್ತವೆ .

ನಾನು ಈ ಅರ್ಜಿಯಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿಯ ಗುರುತಿಸಿದ ದಾಖಲೆಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು .

| **ಕ್ರ. ಸಂ.** | **ದಾಖಲೆಗಳ ನಮೂನೆ** | **ನಿಶಾನೆ** |
|---|---|---|
| 1 | ಶಿರಾಳಕೊಪ್ಪ ಸಮುದಾಯ ಆರೋಗ್ಯ ಕೇಂದ್ರದವರು ನೀಡಿರುವ ಹೊರರೋಗಿಗಳ ಚೀಟಿ | ನಿ.ಪಿ-13 |
| 2 | ಗಾಯದ ಪ್ರಮಾಣ ಪತ್ರದ ದೃಡೀಕೃತ ಪ್ರತಿ | ನಿ.ಪಿ-14 |
| 3 | ಸರ್ಜಿ ಆಸ್ಪತ್ರೆಯವರು ನೀಡಿದ ಡಿಸಚಾರ್ಜ ಸಮ್ಮರಿ | ನಿ.ಪಿ-15 |
| 4 | ಮೆಗ್ಗಾನ ಜಿಲ್ಲಾ ಆಸ್ಪತ್ರೆ ಶಿವಮೊಗ್ಗ, ಸರ್ಜಿ ಆಸ್ಪತ್ರೆ ಶಿವಮೊಗ್ಗ ಇವರು ನೀಡಿದ ಹೊರರೋಗಿಗಳ ನೊಂದಣಿ ಚೀಟಿ ( ಒಟ್ಟು 05) | ನಿ.ಪಿ-16 |
| 5 | ಸರ್ಜಿ ಆಸ್ಪತ್ರೆಯವರು ನೀಡಿದ ಅಂತಿಮ ಬಿಲ್ | ನಿ.ಪಿ-17 |
| 6 | ಸರ್ಜಿ ಎಸ್ ಎಸ್ ಫಾರ್ಮಾ ಇವರು ನೀಡಿದ ಟ್ಯಾಕ್ಸ ಇನವೈಸ್ | ನಿ.ಪಿ-18 |
| 7 | 40 ಮೆಡಿಕಲ್ ಬಿಲ್ಲುಗಳು | ನಿ.ಪಿ-19 |
| 8 | ಮಯೂರ್ ನರ್ಸಿಂಗ್ ಹೋಮ್ ನವರು ನೀಡಿದ 03 ಬಿಲ್ಲುಗಳು (ಜಿ ಎಸ್ ಟಿ ಮತ್ತು ಸಿ ಎಸ್ ಟಿ ಪಾವತಿಸಿರುವುದು ಕಂಡು ಬರುವುದಿಲ್ಲ ) | ನಿ.ಪಿ-20 |

| | | |
|---|---|---|
| 9 | 10 ಔಷಧಿ ಚೀಟಿಗಳು | ನಿ.ಪಿ-21 |
| 10 | ಮಯೂರ್ ನರ್ಸಿಂಗ್ ಹೋಮ್ ಧಾರವಾಡರವರು ನೀಡಿದ ಅಂಗನ್ಯೂನ್ಯತಾ ಪ್ರಮಾಣ ಪತ್ರ ಹಾಗೂ ಅಸೆಸಮೆಂಟ್ ಫಫಾರ್ಮಾ | ನಿ.ಪಿ-22 |
| 11 | ಮಯೂರ್ ನರ್ಸಿಂಗ್ ಹೋಮ್ ಧಾರವಾಡರವರು ನೀಡಿದ ಕೇಸಶೀಟ್ | ನಿ.ಪಿ-23 |
| 12 | ಧಾರವಾಡ ಸ್ಯಾಕ್ಕನ್ ಸೆಂಟರ್ ಇವರು ನೀಡಿದ ಕ್ಷ-ಕಿರಣ ವರದಿ ಮತ್ತು ಫಿಲ್ಮ | ನಿ.ಪಿ-24 |

**ಪಾಟೀಸವಾಲುಃ 1 ನೇ ಎದುರುದಾರರ ಪರ ಶ್ರೀ ಬಿ ಕೆ ಎಸ್ ವಕೀಲರಿಂದ**

**1 ನೇ ಎದುರುದಾರರ ಮತ್ತು ಅವರ ಪರ ವಕೀಲರನ್ನು ಕೂಗಿಸಲಾಯಿತು . ಗೈರು ಹಾಜರು ಇದ್ದಾರೆ , ಕೋರಿಕೆ ಇಲ್ಲ , ಕಾರಣ ಪಾಟೀಸವಾಲು ಇಲ್ಲ ಎಂದು ಪರಿಗಣಿಸಲಾಯಿತು .**

**ಪಾಟೀಸವಾಲುಃ 2 ನೇ ಎದುರುದಾರರ ಪರ ಶ್ರೀ ಎಸ್ ಎನ್ ಬಿ ವಕೀಲರಿಂದ**

ನಾನು ಈ ದಿನ ಧಾರವಾಡದ ಶಾರದಾ ಕಾಲೋನಿಯಿಂದ ಬಂದಿದ್ದೇನೆ . ಅಪಘಾತವಾದ ಸ್ಥಳ ಅದು ಘಾಟ ಸೆಕ್ಷನ್ ನಲ್ಲಿದೆ ಎಂದರೆ ಸರಿಯಲ್ಲ . ಅಪಘಾತ ಸ್ಥಳದಲ್ಲಿ ರಸ್ತೆ ತಿರುವಿನಿಂದ ಕೂಡಿದೇ ಎಂದರೆ ಸಾಕ್ಷಿಯು ಸ್ವಲ್ಪ ತಿರುವು ಇದೆ ಎಂದು ಹೇಳುತ್ತಾರೆ . ಸಾಮಾನ್ಯವಾಗಿ ತಿರುವಿನಲ್ಲಿ ವಾಹನಗಳು ವೇಗವಾಗಿ ಚಲಿಸುವುದಿಲ್ಲ ಎಂದರೆ ಸರಿಯಲ್ಲ . ನಾವು ಸವಾರಿ ಮಾಡುತ್ತಿದ್ದ ಮೋಟರ ಸೈಕಲನ್ನು ನಾನೇ ಚಲಾಯಿಸುತ್ತಿದ್ದೆ . ನನಗೆ ಮೋಟರ ಸೈಕಲ್ ಚಲಾಯಿಸಲು ಪರವಾನಿಗೆ ಇದೆ . ಸದರಿ ಪರವಾನಿಗೆಯನ್ನು ಈ ಅರ್ಜಿಯಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿ . ಸದರಿ ಅಪಘಾತದಲ್ಲಿ ಮತ್ತೊಂದು ಮೋಟರ ಸೈಕಲ ಭಾಗಿಯಾಗಿದೆ ಎಂದರೆ ಸರಿ . ಅಪಘಾತದ ಸಮಯದಲ್ಲಿ ನನ್ನ ಹಾಗೂ ನನ್ನ ವಾಹನದ ಹಿಂದೆ ಬರುತ್ತಿದ್ದ ಮೋಟರ ಸೈಕಲ್ ಸವಾರ ಅತೀ

ವೇಗವಾಗಿ ಚಲಾಯಿಸುತ್ತಿದ್ದ ಕಾರಣ ಎರಡೂ ಮೋಟರ ಸೈಕಲ್ ಗಳ ನಡುವೆ ನನ್ನ ತಪ್ಪಿನಿಂದಲೇ ಈ ಅಪಘಾತ ಆಗಿದೆ ಎಂದರೆ ಸರಿಯಲ್ಲ . ಅಪಘಾತದ ಸಮಯದಲ್ಲಿ ನಾನು ಸವಾರಿ ಮಾಡುತ್ತಿದ್ದ ಮೋಟರ ಸೈಕಲ್ ಮತ್ತು ನಮ್ಮ ಹಿಂದೆ ಬರುತ್ತಿದ್ದ ಮೋಟರ ಸೈಕಲ್ ನಡುವೆ ಅಪಘಾತವಾಯಿತು ಎಂದರೆ ಸರಿಯಲ್ಲ . ನಾನು ಸವಾರಿ ಮಾಡುತ್ತಿದ್ದ ಮೋಟರ ಸೈಕಲ್ ಮತ್ತು ನಮ್ಮ ಹಿಂದೆ ಬರುತ್ತಿದ್ದ ಮೋಟರ ಸೈಕಲ್ ನಮ್ಮ ಎದುರಿನಿಂದ ಬರುತ್ತಿದ್ದ ಪಿಕ್ ಅಪ್ ವಾಹನಕ್ಕೆ ಡಿಕ್ಕಿಪಡಿಸಿವೆ ಎಂದರೆ ಸರಿಯಲ್ಲ . ಈ ಅಪಘಾತವನ್ನು ತಪ್ಪಿಸಲು ಪಿಕ್ ಅಪ್ ವಾಹನ ಚಾಲಕ ತುಂಬಾ ಪ್ರಯತ್ನ ಮಾಡಿದ್ದಾನೆ ಎಂದರೆ ಸರಿಯಲ್ಲ . ಆದ್ದರಿಂದ ಅಪಘಾತವು ಪಿಕ್ ಅಪ್ ವಾಹನ ಚಾಲಕನ ತಪ್ಪಿನಿಂದ ಆಗಿಲ್ಲ ಎಂದರೆ ಸರಿಯಲ್ಲ .

ಅಪಘಾತದ ನಂತರ ಮೊದಲು ಶಿರಾಳಕೊಪ್ಪದ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದು ನಂತರ ಶಿವಮೊಗ್ಗ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದರು . ನಂತರ ಶಿವಮೊಗ್ಗ ಸರ್ಜಿ ಆಸ್ಪತ್ರೆಗೆ ಹೋದೆನು . ಸರ್ಜಿ ಆಸ್ಪತ್ರೆಯಿಂದ ಬಿಡುಗಡೆ ಹೊಂದಿ ಧಾರವಾಡದ ಮಯೂರ ಆಸ್ಪತ್ರೆಗೆ ಹೋದೆನು . ಶಿರಾಳಕೊಪ್ಪದ ಸರ್ಕಾರಿ ಆಸ್ಪತ್ರೆ ಪ್ರಥಮ ಚಿಕಿತ್ಸೆ ಪಡೆದು ನಂತರ ಶಿವಮೊಗ್ಗದ ಸರ್ಕಾರಿ ಆಸ್ಪತ್ರೆಗೆ ಹೋದೆನು . ಶಿವಮೊಗ್ಗದ ಸರ್ಕಾರಿ ಆಸ್ಪತ್ರೆಯಲ್ಲಿ ಒಂದು ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೇನೆ . ಸರ್ಜಿ ಆಸ್ಪತ್ರೆಯಲ್ಲಿ ಮೂರು ದಿನಗಳ ಕಾಲ ಒಳರೋಗಿಯಾಗಿ ದಾಖಲಾಗಿದ್ದೆ . ಸರ್ಜಿ ಆಸ್ಪತ್ರೆಯಲ್ಲಿ ವೈದ್ಯರಿಗೆ ಗಾಯಗಳು ಹೇಗೆ ಆದವು ಎನ್ನುವುದನ್ನು ನಾನೇ ಮಾಹಿತಿ ಕೊಟ್ಟಿದ್ದೇನೆ . ನನಗೆ ಆಂಗ್ಲ ಭಾಷೆ ಓದಲು ಮತ್ತು ಬರೆಯಲು ಬರುವುದಿಲ್ಲ . ಸರ್ಜಿ ಆಸ್ಪತ್ರೆಯಲ್ಲಿ ವೈದ್ಯರ ಮುಂದೆ ಎರಡು ವಾಹನಗಳ ನಡುವೆ ಅಪಘಾತವಾಗಿರುವುದಾಗಿ ನಾನು ಮಾಹಿತಿ ಕೊಟ್ಟಿದ್ದೇನೆ ಎಂದು ಉಲ್ಲೇಖಿಸಿದ್ದಾರೆ ಎಂದರೆ ಸರಿ . ನಾನು ಸದರಿ ಆಸ್ಪತ್ರೆಯಿಂದ ಸಂಪೂರ್ಣವಾಗಿ ಗುಣಮುಖ ಹೊಂದಿದ ನಂತರ ಬಿಡುಗಡೆ ಹೊಂದಿದ್ದೇನೆ ಎಂದರೆ ಸರಿಯಲ್ಲ . ಸಂಪೂರ್ಣವಾಗಿ ಗುಣಮುಖ ಹೊಂದದೇ

ಇದ್ದರೂ ಆಸ್ಪತ್ರೆಯಿಂದ ಏಕೆ ಬಿಡುಗಡೆ ಹೊಂದಿರಿ ಎಂದು ಕೇಳಿದರೆ ಸಾಕ್ಷಿಯು ಆಸ್ಪತ್ರೆಯ ವೆಚ್ಚವನ್ನು ಭರಿಸುವ ಯೋಗ್ಯತೆ ಇಲ್ಲದ ಕಾರಣ ಬಿಡುಗಡೆ ಹೊಂದಿದೆ ಎಂದು ಹೇಳುತ್ತಾರೆ . ಸರ್ಜಿ ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ ನಂತರ ಧಾರವಾಡದ ಮಯೂರ ಆಸ್ಪತ್ರೆಯಲ್ಲಿ ಮಾತ್ರ ಚಿಕಿತ್ಸೆ ಪಡೆದಿದ್ದೇನೆ . ಮಯೂರ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿಲ್ಲ . ಧಾರವಾಡದ ಮಯೂರ ಆಸ್ಪತ್ರೆಯಲ್ಲಿ ಒಟ್ಟು 06 ಬಾರಿ ಚಿಕಿತ್ಸೆ ಪಡೆದಿದ್ದೇನೆ . ನಾನು ನನ್ನ ದಿನನಿತ್ಯದ ಕೆಲಸಗಳನ್ನು ಸ್ವತಂತ್ರವಾಗಿ ಮಾಡಿಕೊಳ್ಳುತ್ತಿಲ್ಲ ಸಾಕ್ಷಿಯು ಆದರೆ ಓಡಾಡುತ್ತೇನೆ ಎಂದು ಹೇಳುತ್ತಾರೆ. ಅಪಘಾತದ ನಂತರ ನನಗೆ ಪ್ಲಂಬಿಂಗ್ ಕೆಲಸ ಮಾಡಲು ಆಗುತ್ತಿಲ್ಲ . ಪ್ಲಂಬಿಂಗ್ ಕೆಲಸದಲ್ಲಿ ಪೈಪ್ ತರುವುದು , ಎತ್ತುವುದು ಮತ್ತು ಜೊಡಿಸುವುದು ಅದು ಕಷ್ಟದ ಕೆಲಸ ಅಲ್ಲ ಎಂದರೆ ಸರಿಯಲ್ಲ . ನಾನು ನನ್ನ ಸಹಾಯಕರ ಮೂಲಕ ಪ್ಲಂಬಿಂಗ್ ಕೆಲಸ ಮಾಡಿಸಲು ತೊಂದರೆ ಇಲ್ಲ . ಸಾಕ್ಷಿಯು ಅಪಘಾತದ ನಂತರ ನನ್ನ ಕೆಲಸಗಾರರು ಬಿಟ್ಟು ಹೋಗಿದ್ದಾರೆ ಎಂದು ಸ್ವತಃ ಹೇಳುತ್ತಾರೆ . ನಾನು ಈಗಲೂ ಪ್ಲಂಬಿಂಗ್ ಕೆಲಸ ಮಾಡುತ್ತಿದ್ದು ಆದರೂ ಸಹ ಅಪಘಾತದ ಮೊದಲಿನಂತೆ ಕೆಲಸ ಮಾಡಲು ಆಗುತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಾನು ಹಾಜರುಪಡಿಸಿರುವ ದಾಖಲೆಗಳು ಮತ್ತು ಮೆಡಿಕಲ್ ಬಿಲ್ಲುಗಳು ಸೃಷ್ಟಿ ಮಾಡಿತಂದು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ . ಮಯೂರ ಆಸ್ಪತ್ರೆಯವರು ನೀಡಿದ ನಿಪಿ-22 ನಾನು ಪರಿಹಾರ ಪಡೆಯಲು ಯಾವುದೇ ರೀತಿಯಿಂದ ಸಹಕಾರಿ ಆಗುವುದಿಲ್ಲ ಎಂದರೆ ಸರಿಯಲ್ಲ . ನಾನು ನನ್ನ ಉದ್ಯೋಗ , ವರಮಾನ ಹಾಗೂ ವಯಸ್ಸಿನ ಕುರಿತಾದ ದಾಖಲೆಗಳನ್ನು ಹಾಜರುಪಡಿಸದೇ ಇದ್ದರೂ ಅಪಘಾತದ ಸಮಯದಲ್ಲಿ ತನ್ನ ವಯಸ್ಸನ್ನು 45 ಎಂದು, ಉದ್ಯೋಗ ಪ್ಲಂಬಿಂಗ್ ಕೆಲಸವೆಂದು, ವರಮಾನ ಪ್ರತಿ ತಿಂಗಳು ರೂ. 25,000/- ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ವೈದ್ಯಕೀಯ ವೆಚ್ಚಕ್ಕಾಗಿ ರೂ . 5 ಲಕ್ಷ ರೂಪಾಯಿ ಹಣ ಖರ್ಚು ಮಾಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಅಪಘಾತದ ಪರಿಣಾಮ ಉಂಟಾದ ಗಾಯಗಳಿಂದ ನನಗೆ

ಶಾಶ್ವತ ಅಂಗನ್ಯೂನ್ಯತೆ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಾನು ಹಾಜರುಪಡಿಸಿರುವ ದಾಖಲೆಗಳನ್ನು ನನ್ನ ಅರ್ಜಿಗೆ ಪೂರಕವಾಗಿ ಅನುಕೂಲವಾಗುವಂತೆ ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ . ಪಿಕ್ ಅಪ್ ವಾಹನ ಚಾಲಕನು ಅಧಿಕೃತವಾಗಿ ಚಾಲನಾ ಪರವಾನಿಗೆ ಹೊಂದದ ಕಾರಣ ನಾನು ಕೇಳಿರುವಂತೆ ಪರಿಹಾರ ಪಾವತಿಸುವ ಹೊಣೆ 2 ನೇ ಎದುರುದಾರನಿಗೆ ಅನ್ವಯವಾಗುವುದಿಲ್ಲ ಎಂದರೆ ಸರಿಯಲ್ಲ . ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

**ಮರುವಿಚಾರಣೆ ಃ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.